ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/83/ಸುತ್ತೋಲೆ/2022-23/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು ದಿನಾಂಕ:11.07.2023

## ಸುತ್ತೋಲೆ

ವಿಷಯ: ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ e-Rupi ವ್ಯವಸ್ಥೆಯನ್ನು ಅಳವಡಿಸಿರುವ ಸಂಬಂಧ ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳ ಬ್ಯಾಂಕ್ ಖಾತೆ VPA (Virtual Payment Address) ID ಅನ್ನು ಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಕಇ/ಇಡಿ/03/ವಿ.ವೇತನ ಕೋಶ/ಸಿಆರ್/2022-23 ದಿನಾಂಕ:10.02.2023.
2: ಸಮಸಂಖ್ಯೆಯ ಪತ್ರದ ದಿನಾಂಕ:27.02.2023

**********

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಹಾಗೂ ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಸಮಾಜ ಕಲ್ಯಾಣ ಇಲಾಖೆಯು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಮೂಲಕ ಮಂಜೂರು ಮಾಡುತ್ತಿದೆ. ಅದರಂತೆ 2022-23ನೇ ಸಾಲಿನಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾದ ವಿದ್ಯಾರ್ಥಿ ವೇತನದ ಮೊತ್ತವನ್ನು e-Rupi ಮುಖಾಂತರ ಪಾವತಿ ಮಾಡಲು ಸಮಾಜ ಕಲ್ಯಾಣ ಇಲಾಖೆಯಿಂದ ಕ್ರಮ ವಹಿಸಲಾಗಿರುತ್ತದೆ.

E-rupee ಮೂಲಕ Generate ಮಾಡಲಾದ Voucher ಅನ್ನು Redeem ಮಾಡಿಕೊಳ್ಳಲು ಈ ಕೆಳಗೆ ಸೂಚಿಸಿದ ಬ್ಯಾಂಕುಗಳಲ್ಲಿ ಮಾತ್ರ VPA (Virtual Payment Address) ಲಭ್ಯವಿದ್ದು, VPA ID ಪಡೆದುಕೊಳ್ಳಲು ಉಲ್ಲೇಖ 2ರ ದಿನಾಂಕದಂದು ಸೂಚಿಸಲಾಗಿತ್ತು. ಆದರೆ VPA ID ಪಡೆದುಕೊಂಡಿರುವ ಬಗ್ಗೆ ಸಂಬಂದಪಟ್ಟ ಕಾಲೇಜುಗಳಿಂದ ಮಾಹಿತಿ ಲಭ್ಯವಾಗಿರುವುದಿಲ್ಲ. ಅದ್ದರಿಂದ ಈ ಕೆಳಗೆ ತಿಳಿಸಿರುವ ಬ್ಯಾಂಕುಗಳ ಶಾಖೆಗಳಲ್ಲಿ ಖಾತೆಯನ್ನು(ವಿದ್ಯಾರ್ಥಿವೇತನ) ಹೊಂದಿರುವ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಯ ವಿದ್ಯಾರ್ಥಿವೇತನ ಖಾತೆಗೆ ಸಂಬಂದಿಸಿದ ಬ್ಯಾಂಕಿನ ನಿಖರವಾದ ವಿಳಾಸವನ್ನು ಬ್ಯಾಂಕಿನಿಂದ VPA (Virtual Payment Address) ಪಡೆದು, Bank Branch Manager ಮತ್ತು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಜಂಟಿ ಸಹಿಯೊಂದಿಗೆ VPA ID ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿ VPA ID ವಿವರವನ್ನು ಗೂಗಲ್ ಫಾರಂನಲ್ಲಿ ಈ ಮುಂದಿನ ಲಿಂಕ್ ಮೂಲಕ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ VPA ID ಪಡೆಯದಿರುವ ಕಾಲೇಜುಗಳ ಪ್ರಾಂಶುಪಾಲರು ಕಡ್ಡಾಯವಾಗಿ ಈ ಕೂಡಲೇ VPA ID ಅನ್ನು ಪಡೆದು ದಿನಾಂಕ:18.07.2023 ರೊಳಗೆ ಸಲ್ಲಿಸಲು ಮತ್ತು VPA ID ಪಡೆಯದಿರುವ ಬಗ್ಗೆ ಕಾರಣವನ್ನು ನೀಡಲು ಮೂಲಕ ಸೂಚಿಸಲಾಗಿದೆ.

| | | | | |
|---|---|---|---|---|
| 1. State Bank of India | 2. Canara Bank | 3. Bank of Baroda | 4. Axis Bank | 5. Indian Bank |
| 6. HDFC Bank | 7. ICICI Bank | 8.Punjab National Bank | | 9.UCO Bank |
| Link for Govt Colleges: https://forms.gle/KavXtLARDzZGwmNJ7 | | | | |
| Li nk for Aided Colleges: https://forms.gle/qaMRdV1G6vrzb2x19 | | | | |

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ: 1.ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ – ತಮ್ಮ ವ್ಯಾಪ್ತಿಯ ಅನುದಾನಿತ ಕಾಲೇಜುಗಳಿಂದ ಮಾಹಿತಿ ಕ್ರೋಡಿಕರಿಸಿ ಸಲ್ಲಿಸುವುದಕ್ಕಾಗಿ
2. ಪ್ರಾಂಶುಪಾಲರುಗಳು, ರಾಜ್ಯ ಎಲ್ಲಾ ಸರ್ಕಾರಿ, ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು.
4. ಕಛೇರಿ ಪ್ರತಿ